DFA/1204547

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಟಿ.ಎ ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 127 |
| ಉತ್ತರಿಸಬೇಕಾದ ದಿನಾಂಕ | 05.07.2023 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಮುಖ್ಯ ಮಂತ್ರಿಗಳ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಯನ್ನು ಯಾವ ವರ್ಷ ಜಾರಿಗೊಳಿಸಲಾಯಿತು; ಮತ್ತು ಈ ಯೋಜನೆಯಡಿ ಇಲ್ಲಿಯವರೆಗೆ ಎಷ್ಟು ಅರ್ಜಿಗಳು ಬಂದಿವೆ; (ಪ್ರದೇಶವಾರು ಮಾಹಿತಿ ನೀಡುವುದು) | "ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ವಇ 57 ಹೆಚ್ಎಹೆಚ್ 2017, ದಿನಾಂಕ: 23.10.2017 ರಂದು ಸರ್ಕಾರದ ಆದೇಶ ಹೊರಡಿಸಲಾಗಿದೆ.<br>ಈ ಯೋಜನೆಯಡಿ ದಿನಾಂಕ: 26.06.2023 ರವರೆಗೆ 51,732 ಅರ್ಜಿಗಳು ಆನ್‌ಲೈನ್ ಮೂಲಕ ಸ್ವೀಕೃತವಾಗಿವೆ. ವಿವರಗಳನ್ನು ಅನುಬಂಧ - 1 ರಲ್ಲಿ ಒದಗಿಸಲಾಗಿದೆ. |
| ಆ) | ಸದರಿ ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ; ಎಲ್ಲೆಲ್ಲಿ ನಿರ್ಮಿಸಲಾಗಿದೆ; | "ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಅಡಿಯಲ್ಲಿ ಇಲ್ಲಿಯವರೆಗೆ 5,961 (ಜಿ+3 ಇಂದ ಎಸ್+14) ಬಹುಮಹಡಿ ಮನೆಗಳನ್ನು ನಿರ್ಮಿಸಲಾಗಿದೆ. ವಿವರಗಳನ್ನು ಅನುಬಂಧ - 2 ರಲ್ಲಿ ಒದಗಿಸಲಾಗಿದೆ. |
| ಇ) | ಏಪ್ರಿಲ್ 2023 ರವರೆಗೆ ಎಷ್ಟು ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ; ಮತ್ತು ಮನೆ ಹಸ್ತಾಂತರ ಪೂರ್ಣಗೊಳಿಸದಿರಲು ಕಾರಣಗಳೇನು? | "ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಅಡಿಯಲ್ಲಿ ಪೂರ್ಣಗೊಳಿಸಿರುವ 5,961 (ಜಿ+3 ಇಂದ ಎಸ್+14) ಬಹುಮಹಡಿ ಮನೆಗಳನ್ನು ನೋಂದಣಿ ಮಾಡಿ ಫಲಾನುಭವಿಗಳಿಗೆ ಹಸ್ತಾಂತರಿಸಲು ಕ್ರಮ ವಹಿಸಲಾಗುತ್ತಿದೆ.<br>ಆನ್‌ಲೈನ್ ಮುಖಾಂತರ ಮನೆ/ಫ್ಲಾಟ್‌ಗಳನ್ನು ಆಯ್ಕೆ ಮಾಡಿಕೊಂಡಿರುವ ಫಲಾನುಭವಿಗಳು, ಅವರು ಪಾವತಿಸಬೇಕಾದ ಫಲಾನುಭವಿ ವಂತಿಕೆ ರೂ.7.10 ಲಕ್ಷಗಳನ್ನು (ಪ.ಜಾ/ಪ.ಪಂ) ಮತ್ತು ರೂ.7.90 ಲಕ್ಷಗಳನ್ನು (ಸಾಮಾನ್ಯ) ಪೂರ್ಣ ಪ್ರಮಾಣದಲ್ಲಿ ಇಲ್ಲಿಯವರೆಗೂ ಪಾವತಿಸದೇ ಇರುವುದರಿಂದ ಸದರಿಯವರಿಗೆ ಮನೆಗಳನ್ನು ಹಸ್ತಾಂತರಿಸಲು ಸಾಧ್ಯವಾಗಿರುವುದಿಲ್ಲ. |

ಸಂಖ್ಯೆ: ವಇ 83 ಹೆಚ್ಎಫ್ಎ 2023

(ಬಿ.ಝಡ್ ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್,ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು



Generated from eOffice by Zameer Ahmed Khan, DOH-MinisterHou(ZAK), MINISTER, Housing SECRETARIAT on 03/07/2023 03:29 PM